

ಮುಖವೇ ವೈರಿಯಾಗುವ ಒಂದು ನೋವಿನ ಸತ್ಯಚರಿತ್ರೆ!

■ ಡಾ. ಗುರುರಾಜ ಅರಕೇರಿ

# ಆತ್ಮಹತ್ಯಾ ರೋಗ

## ಟ್ರೈಜೆಮಿನಲ್ ನ್ಯೂರಾಲ್ಜಿಯಾ

ಕ್ಷಣಕಾಲ ಕಲ್ಪಿಸಿಕೊಳ್ಳಿ... ನಿಮ್ಮ ಮುಖದಲ್ಲಿ ಇದ್ದಕ್ಕಿದ್ದಂತೆ ವಿದ್ಯುತ್ ಶಾಕ್‌ನಂತಹ ತೀಕ್ಷ್ಣ ನೋವು, ಒಂದೇ ಕ್ಷಣದಲ್ಲಿ ಪ್ರಾಣ ಹಾರಿಹೋಗುವಂತಹ ಭಯಾನಕ ಅನುಭವ. ಹಲ್ಲು ಉಜ್ಜುವಾಗ, ತಿನ್ನುವಾಗ, ಶೇವಿಂಗ್ ಮಾಡುವಾಗ ಅಥವಾ ಕೇವಲ ತಂಗಾಳಿಯ ಸ್ಪರ್ಶಕ್ಕೂ ಈ ಅಸಹನೀಯ ವೇದನೆ ಉಂಟಾದರೆ ಜೀವನವೇ ಶತ್ರುವಿನಂತಾಗುತ್ತದೆ.

ಇಂತಹ ಅನುಭವಕ್ಕೆ 'ಟ್ರೈಜೆಮಿನಲ್ ನ್ಯೂರಾಲ್ಜಿಯಾ' ಎನ್ನುತ್ತಾರೆ. ನರಶೂಲೆಯ ಈ ಕಾಯಿಲೆಯಿಂದ ಬಳಲುವವರಿಗೆ ಈ ಭೀಕರ ದುಃಸ್ವಪ್ನವೇ ದಿನನಿತ್ಯದ ಸಂಗಾತಿ.

ಇತ್ತೀಚೆಗೆ ಬಾಲಿವುಡ್ ನಟ ಸಲ್ಮಾನ್ ಖಾನ್, ದೀರ್ಘಕಾಲೀನ ಟ್ರೈಜೆಮಿನಲ್ ನ್ಯೂರಾಲ್ಜಿಯಾ ಜೊತೆಗಿನ ತಮ್ಮ ಸಂಘರ್ಷದ ಬಗ್ಗೆ ಮುಕ್ತ ಮನಸ್ಸಿನಿಂದ ಹಂಚಿಕೊಂಡಿದ್ದಾರೆ. 2007ರಲ್ಲಿ ಒಂದು ಚಲನಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಈ ಕಾಯಿಲೆಯ ಲಕ್ಷಣಗಳು ಮೊದಲ ಬಾರಿಗೆ ಅವರನ್ನು ಕಾಡತೊಡಗಿದವು. ಮುಖದಲ್ಲಿ ವಿದ್ಯುತ್ ತರಂಗದಂತೆ ಹರಿಯುವ ಈ ತೀವ್ರ ನೋವು ಅವರ ದೈನಂದಿನ ಜೀವನವನ್ನು ಮತ್ತು ವೃತ್ತಿಜೀವನವನ್ನು ಸಂಪೂರ್ಣವಾಗಿ ಅಸ್ತವ್ಯಸ್ತಗೊಳಿಸಿತು. ಈ ಯಾತನೆಯ ನಡುವೆಯೂ ಅವರು ತಮ್ಮ ನಟನೆಯನ್ನು ಮುಂದುವರಿಸಿದರು. ಕೊನೆಗೆ, 2011ರಲ್ಲಿ ನೋವಿನ ತೀವ್ರತೆ ತಾಳದಾದಾಗ ಅಮೆರಿಕದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು.

'ಈ ನೋವು ತಮ್ಮನ್ನು ಖಿನ್ನತೆಯ ಕೂಪಕ್ಕೆ ಮತ್ತು ಆತ್ಮಹತ್ಯೆಯ ಆಲೋಚನೆಗಳ ಕಡೆಗೆ ಒಯ್ದಿತು' ಎಂದಿರುವ ಸಲ್ಮಾನ್ ಖಾನ್, 'ಆಹಾರ ಅಗಿಯುವಾಗ, ಮಾತನಾಡುವಾಗ ಅಥವಾ ಮುಖಕ್ಕೆ ಗಾಳಿಯ ಸ್ಪರ್ಶವಾದಾಗ ವಿದ್ಯುತ್ ಸ್ಪರ್ಶದಂತಹ ನೋವು ಉಂಟಾಗುತ್ತಿತ್ತು' ಎಂದಿದ್ದಾರೆ. ನ್ಯೂರಾಲ್ಜಿಯಾ ಕಾಯಿಲೆಯಿಂದ ಬಳಲುವ ಅಸಂಖ್ಯ ಜನರ ಅನುಭವಕ್ಕೆ ಅವರ ಈ ಮಾತುಗಳು ಕನ್ನಡಿಯಂತಿದ್ದವು.

'ದ ಗ್ರೇಟ್ ಇಂಡಿಯನ್ ಕಪಿಲ್ ಶೋ'ದಲ್ಲಿ ತಮ್ಮ ಆರೋಗ್ಯದ ಕುರಿತು ಮಾತನಾಡುವಾಗ ಸಲ್ಮಾನ್ ಖಾನ್, ಶಸ್ತ್ರಚಿಕಿತ್ಸೆಯ ನಂತರವೂ ಟ್ರೈಜೆಮಿನಲ್ ನ್ಯೂರಾಲ್ಜಿಯಾ,

